# ತುಮಕೂರು ವಿಶ್ವವಿದ್ಯಾನಿಲಯ

**ಪರೀಕ್ಷಾ ಭವನ , ಬಿ. ಹೆಚ್. ರಸ್ತೆ , ತುಮಕೂರು-572 103 ☎:0816-2255650,2273511 ಫ್ಯಾಕ್ಸ್:0816-2270719**


ಸಂಖ್ಯೆ:ತುವಿ:ಪವಿ:2025–26: 374 ದಿನಾಂಕ:18.07.2025

# : ಕಚೇರಿ ಆದೇಶ :

**ವಿಷಯ : ಕೋವಿಡ್ – 19 ರ ಕಾರಣದಿಂದಾಗಿ ಪರೀಕ್ಷೆ ಇಲ್ಲದೇ ಉನ್ನತೀಕರಣಗೊಳಿಸುವ ಸೌಲಭ್ಯದ ಕುರಿತು.**

**ಉಲ್ಲೇಖ :**
1. ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ಪವಿ:ವಿನಿ–03:2023-24/543 ದಿನಾಂಕ:16.09.2023
2. ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ಪವಿ:2025-26/137 ದಿನಾಂಕ:20.05.2025
3. ದಿನಾಂಕ:03.07.2025 ರಂದು ನಡೆದ ಆರನೇ ಸಾಮಾನ್ಯ ಸಿಂಡಿಕೇಟ್ ಸಭಾ ನಿರ್ಣಯ.
4. ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ:16.07.2025

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19, 2019-20 ಮತ್ತು 2020-21 ನೇ ಸಾಲಿನ ವಿದ್ಯಾರ್ಥಿಗಳಿಗೆ 2023-24 ನೇ ಸಾಲಿನಲ್ಲಿ ನಡೆದ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ (ಸೈದ್ಧಾಂತಿಕ ಮತ್ತು ಪ್ರಾಯೋಗಿಕ) ಪರೀಕ್ಷೆಗಳೊಂದಿಗೆ ಪರೀಕ್ಷೆಯನ್ನು ಬರೆಯಲು ಹಾಗೂ ಅದರಂತೆ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್ ಫಲಿತಾಂಶವನ್ನು ಪಡೆಯಲು ಅಂತಿಮ ಅವಕಾಶವನ್ನು ನೀಡಿ ಸದರಿ ಸೌಲಭ್ಯವನ್ನು ಎಲ್ಲಾ ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಲು ಸಂಬಂಧಪಟ್ಟ ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ಘಟಕ/ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈಗಾಗಲೇ ಉಲ್ಲೇಖ (1) ರ ಈ ಕಚೇರಿ ಸುತ್ತೋಲೆಯ ಮುಖಾಂತರ ತಿಳಿಸಲಾಗಿತ್ತು.

ಮುಂದುವರೆದು, ಉಲ್ಲೇಖ (2) ರ ಈ ಕಚೇರಿ ಸುತ್ತೋಲೆಯಲ್ಲಿ ಕೋವಿಡ್–19 ರ ಕಾರಣದಿಂದಾಗಿ ಪರೀಕ್ಷೆ ಇಲ್ಲದೇ ಉನ್ನತೀಕರಣಗೊಳಿಸುವ ಸೌಲಭ್ಯ 2023-24 ನೇ ಶೈಕ್ಷಣಿಕ ಸಾಲಿನಲ್ಲಿಯೇ ಮುಕ್ತಾಯಗೊಂಡಿರುವುದರಿಂದ 2024-25 ನೇ ಶೈಕ್ಷಣಿಕ ಸಾಲಿನ 2025 ರ ಜನವರಿ–ಮಾರ್ಚ್ ಮಾಹೆಗಳಲ್ಲಿ ನಡೆದ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳಲ್ಲಿ 2018-19, 2019-20 ಮತ್ತು 2020-21 ನೇ ಸಾಲಿನ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರೂ ಸಹ ಇನ್ನು ಮುಂದೆ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಪರೀಕ್ಷಾ ಶುಲ್ಕ ಪಾವತಿಸಿ ಪರೀಕ್ಷೆ ತೆಗೆದುಕೊಂಡೇ (ಸೈದ್ಧಾಂತಿಕ ಮತ್ತು ಪ್ರಾಯೋಗಿಕ) ಉತ್ತೀರ್ಣರಾಗಬೇಕಾಗಿರುತ್ತದೆ ಎಂಬುದನ್ನು ಕಡ್ಡಾಯವಾಗಿ ಸಂಬಂಧಪಟ್ಟ ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ಘಟಕ/ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿರುತ್ತದೆ.

ತದನಂತರ ಹಲವಾರು ಮುಖಂಡರುಗಳು / ವಿದ್ಯಾರ್ಥಿಗಳು / ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ತುಮಕೂರು ಇಲ್ಲಿನ ತುಮಕೂರು ಜಿಲ್ಲಾ ಸಂಘಟನಾ ಕಾರ್ಯದರ್ಶಿಗಳು 2024-25 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳಲ್ಲಿ ಉತ್ತೀರ್ಣಗೊಂಡವರಿಗೂ ಕೋವಿಡ್–19 ರ ಕಾರಣದಿಂದಾಗಿ ಪರೀಕ್ಷೆ ಇಲ್ಲದೇ ಉನ್ನತೀಕರಣಗೊಳಿಸುವ ಸೌಲಭ್ಯ ನೀಡುವಂತೆ ಕೋರಿರುತ್ತಾರೆ.

ತತ್ಸಂಬಂಧ 2018-19, 2019-20 ಮತ್ತು 2020-21 ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಗೆ ಕೋವಿಡ್ – 19 ರ ಕಾರಣದಿಂದಾಗಿ ಪರೀಕ್ಷೆ ಇಲ್ಲದೇ ಉನ್ನತೀಕರಣಗೊಳಿಸುವ ಸೌಲಭ್ಯದ ಕುರಿತು ಚರ್ಚೆ ಮತ್ತು ನಿರ್ಣಯಕ್ಕಾಗಿ ಉಲ್ಲೇಖ (3) ರನ್ವಯ ದಿನಾಂಕ:03.07.2025 ರಂದು ನಡೆದ ಆರನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದ್ದು ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ.

**"ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸ್ನಾತಕ ಪದವಿ 2018-19 ನೇ ಶೈಕ್ಷಣಿಕ ಸಾಲಿನ 04 ನೇ ಸೆಮಿಸ್ಟರ್, 2019-20 ನೇ ಶೈಕ್ಷಣಿಕ ಸಾಲಿನ 02 & 04 ನೇ ಸೆಮಿಸ್ಟರ್ ಮತ್ತು 2020-21 ನೇ ಶೈಕ್ಷಣಿಕ ಸಾಲಿನ 02 ನೇ ಸೆಮಿಸ್ಟರ್‌ನ್ನು ಅಂತಿಮವಾಗಿ ಒಂದು ಬಾರಿಯ ಅವಕಾಶವಾಗಿ ಉನ್ನತೀಕರಣದ ಸೌಲಭ್ಯ ನೀಡಲು ಹಾಗೂ ಈಗಾಗಲೇ ಪರೀಕ್ಷಾ ಶುಲ್ಕ ಪಾವತಿಸಿಕೊಂಡಿದ್ದಲ್ಲಿ ಯಾವುದೇ ಕಾರಣಕ್ಕೂ ಮರುಪಾವತಿಗೆ ಅವಕಾಶವಿರುವುದಿಲ್ಲ ಎಂಬುದಾಗಿ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು."**

ಈ ಹಿನ್ನೆಲೆಯಲ್ಲಿ ಸದರಿ ಸಭೆಯ ನಿರ್ಣಯದನ್ವಯ ಸ್ನಾತಕ ಪದವಿ 2018-19 ನೇ ಶೈಕ್ಷಣಿಕ ಸಾಲಿನ 04 ನೇ ಸೆಮಿಸ್ಟರ್, 2019-20 ನೇ ಶೈಕ್ಷಣಿಕ ಸಾಲಿನ 02 & 04 ನೇ ಸೆಮಿಸ್ಟರ್ ಮತ್ತು 2020-21 ನೇ ಶೈಕ್ಷಣಿಕ ಸಾಲಿನ 02 ನೇ ಸೆಮಿಸ್ಟರ್‌ನ್ನು ಅಂತಿಮವಾಗಿ 2024-25 ನೇ ಶೈಕ್ಷಣಿಕ ಸಾಲಿನಲ್ಲಿ ಮಾತ್ರ ಒಂದು ಬಾರಿಯ ಅವಕಾಶವಾಗಿ ಉನ್ನತೀಕರಣಗೊಳಿಸಲಾಗಿದೆ. ಮುಂದುವರೆದು ಇನ್ನು ಮುಂದೆ 2018-19, 2019-20 ಮತ್ತು 2020-21 ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಗೆ 2024-25 ನೇ ಶೈಕ್ಷಣಿಕ ಸಾಲಿನಲ್ಲಿ ಕಲ್ಪಿಸಲಾಗಿರುವ ಅವಕಾಶವನ್ನು ಹೊರತುಪಡಿಸಿ ಯಾವುದೇ ಕಾರಣಕ್ಕೂ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶಕ್ಕನುಗುಣವಾಗಿ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಫಲಿತಾಂಶವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಅವರುಗಳನ್ನು ಮುಂಬರುವ ಎಲ್ಲಾ ಪರೀಕ್ಷೆಗಳಿಗೂ ಪೂರಕ ವಿದ್ಯಾರ್ಥಿಗಳೆಂದೇ ಪರಿಗಣಿಸಲಾಗುವುದು ಹಾಗೂ ಇನ್ನು ಮುಂದೆ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ನ ಎಲ್ಲಾ ವಿಷಯಗಳನ್ನು (ಸೈದ್ಧಾಂತಿಕ ಮತ್ತು ಪ್ರಾಯೋಗಿಕ) ಪರೀಕ್ಷೆ ತೆಗೆದುಕೊಂಡೇ ಉತ್ತೀರ್ಣರಾಗಬೇಕಾಗುತ್ತದೆ ಎಂಬುದನ್ನು ಕಡ್ಡಾಯವಾಗಿ ಸಂಬಂಧಪಟ್ಟ ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ಈ ಮೂಲಕ ಆದೇಶಿಸಲಾಗಿದೆ.

18/7/25

ಕುಲಸಚಿವರು(ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಪ್ರಾಂಶುಪಾಲರುಗಳು, ಘಟಕ / ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು :

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. – **ಇಂದೇ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸುವುದು ಹಾಗೂ ಎಲ್ಲಾ ಘಟಕ / ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳಿಗೆ ಇ–ಮೇಲ್ ಕಳುಹಿಸುವುದು.**
5. ಗಣಕಯಂತ್ರ ವಿಭಾಗ, ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. – **2025 ರ ಜನವರಿ–ಮಾರ್ಚ್ ಮಾಹೆಗಳಲ್ಲಿ ನಡೆದ ಪರೀಕ್ಷೆಗಳಲ್ಲಿ ಸದರಿ ಸಾಲಿನ ವಿದ್ಯಾರ್ಥಿಗಳು ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳಲ್ಲಿ ಉತ್ತೀರ್ಣಗೊಂಡಿದ್ದಲ್ಲಿ ಅನ್ವಯಿಸುವ ಸೆಮಿಸ್ಟರ್‌ನ್ನು ಉನ್ನತೀಕರಣಗೊಳಿಸಲು ಸೂಚಿಸಿದೆ.**
6. ಕಚೇರಿ ಪ್ರತಿ.